ಹಣದ ಪರಿಸ್ಥಿತಿ ನೋಡಿಕೊಂಡು ಆ ರಸ್ತೆಯ ಕಾರ್ಯವನ್ನು ಮಾಡೋಣ.

ಶ್ರೀ ಬಾಪುಗೌಡ :—7 ರಸ್ತೆಗಳನ್ನು 1966 ರಲ್ಲಿ ಮಂಜೂರು ಮಾಡಿದ್ದೀರಿ. ಆಗ ಆದಕ್ಕೆ ಎಸ್ಟಿಮೇಟ್ ಎನಿತ್ತು, ಈಗ ಎಸ್ಟಿಮೇಟ್ ಏನಾಗಿದೆ ? ಈ ವರ್ಷದಲ್ಲಿ ಎಷ್ಟೆಷ್ಟು ಕೆಲಸಕಾರ್ಯಗಳನ್ನು ತಾವು ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್ :—1966ರಲ್ಲಿ ಅದು ಮಂಜೂರಾದ ಮೇಲೆ 1975ರವರೆಗೆ ಆ ಕಾರ್ಯವನ್ನು ತೆಗೆದುಕೊಂಡಿಲ್ಲ. ಎಸ್ಟಿಮೇಟ್ ಸ್ವಾಭಾವಿಕವಾಗಿ ಜಾಸ್ತಿಯಾಗುತ್ತದೆ. ಹಣವಿಲ್ಲದೆ ಅದನ್ನು ತೆಗೆದುಕೊಳ್ಳದೇ ಇರುವುದೇ ಹೊರತ್ತು ಮತ್ತೆ ಇನ್ನೇನೂ ಕಾರಣವಿಲ್ಲ. ರಸ್ತೆ ಫಾರ್ಮೇಷನ್ ಮಾಡುವುದಕ್ಕೆ ಕೆಲಸ ಆರಂಭವಾಗಿದೆ. ಅದರ ಅಪ್ರೋಚ್ ರೋಡಿಗಾಗಿ ಈಗಾಗಲೇ 13 ಸಾವಿರ ರೂಪಾಯಿಗಳ ಲಂಪ್‌ಸಂ ಗ್ರಾಂಟ್ ಕೊಟ್ಟಿದೆ. 2 ಮೈಲಿಗಳ ರಸ್ತೆ ಕೆಲಸ ಪೂರ್ತಿಯಾಗಿದೆ. ಅಲ್ಲಿ ಒಂದು ಕಾಜ್‌ವೇ ಕೊಡುವ ಕೆಲಸವನ್ನು ತೆಗೆದುಕೊಂಡಿದ್ದೇವೆ. ನಾಲ್ಕನೆ ಜೋನಿನಿಂದ 7ನೇ ಜೋನಿನವರೆಗೆ ಕೆಲಸವಾಗುತ್ತಿದೆ ಇನ್ನೊಂದು ಐ. ಟಿ. ರೋಡ್‌ಗೆ 75 ಸಾವಿರ ರೂಪಾಯಿಗಳ ಅಂದಾಜಾಗಿದೆ. ಆ ಕೆಲಸಕ್ಕೆ ಅಕ್ವಿಸಿಷನ್ ಬಗ್ಗೆ ತೊಂದರೆ ಆಗಿರುವುದರಿಂದ ಆ ಕೆಲಸವನ್ನು ಈಗ ನಮ್ಯಕ್ಕೆ ನಿಲ್ಲಿಸಲಾಗಿದೆ. ಇನ್ನೊಂದು ರಸ್ತೆಗೆ 65 ಸಾವಿರ ರೂಪಾಯಿಗಳ ಅಂದಾಜು ಆಗಿದೆ. ಅದಕ್ಕೆ ಟೆಂಡರ್ ಕರೆದಿದ್ದೇವೆ.

ಇದರ ಮೆಚ್ಚ ಒಂದು ಲಕ್ಷ 37 ಸಾವಿರ ರೂಪಾಯಿಗಳು. ಈ ರಸ್ತೆಯ ಅಲೈನ್‌ಮೆಂಟನ್ನು ಚೇಂಜ್ ಮಾಡಬೇಕೆಂದು ಅಲ್ಲಿಯ ಅಧಿಕಾರಿಗಳಿಗೆ ತಿಳಿಸಿದೆ.

ಇದಾದ ನಂತರ ಇನ್ನೊಂದು ಐ. ಟಿ. ರಸ್ತೆ. ಇದು ಕಕ್ಕರೆಗೊಳದಿಂದ ಕಡಲೇಬೈಲ್‌ನವರೆಗೂ ಹೋಗುತ್ತದೆ. ಇದರ ಅಂದಾಜು ಎರಡು ಲಕ್ಷ ರೂಪಾಯಿಗಳು. ಈಗ ಇದರ ಎಸ್ಟಿಮೇಟ್ ತಯಾರಾಗಿದೆ.

ಇದಾದನಂತರ ಇನ್ನೊಂದು ಐ ಟಿ. ರಸ್ತೆ ಗಂಗನರಸಿ ಇಂದ ಸಾತೂರಿಗೆ ಹೋಗುತ್ತದೆ. ಇದರ ಅಂದಾಜು 2 ಲಕ್ಷದ 65 ಸಾವಿರ ರೂಪಾಯಿಗಳು. ಇಲ್ಲಿ ಫಾರ್ಮೇಷನ್ ಕೆಲಸ ನಡೆಯುತ್ತಿದೆ.

*Landless Agricultural Families in Chickmagalur and Mudigere Taluks.

66. SRI G. PUTTASAWAMY (Mudigere):--Will the Minister for *Revenue* be pleased to state :—

the number of landless agricultural families in Chickmagalur and Mudigere Taluks and out of them, the number of landless persons belonging to Harijan/Girijan families ?

SRI SUBBIAH SHETTY (Minister of state for cand Reforms) On behalf of SRI *N.* HUTCHAMASTHY GOWDA (Minister for Revenue) :—

CHICKMAGALUR TALUK

Total number of landless agricultural families	5827
Out of them the number of landless Harijan families.	2695
Out of them the number of landless Girijan families.	33

MUDIGERE TALUK

Total number of landless agricultural families	6536
Out of them the number of landless Harijan families.	1109
Out of them the number of landless Girijan families.	105

ಶ್ರೀ ಜಿ. ಪುಟ್ಟಸ್ವಾಮಿ ; ಸ್ವಾಮಿ ಉತ್ತರದಲ್ಲಿ ತಾವು ಒದಗಿಸಿರತಕ ಅಂಕಿ ಅಂಶಗಳು ಯಾವ ಸಾಲಿಗೆ ಸೇರಿದವುಗಳು ?

‡ಶ್ರೀ ಸುಬ್ಬಯ್ಯಶೆಟ್ಟಿ :—ಇದು ನಮ್ಮಲ್ಲಿರತಕ್ಕ ಲೇಟೆಸ್ಟ್ ಫಿಗರ್ಸ್

ಶ್ರೀ ಜಿ. ಪುಟ್ಟಸ್ವಾಮಿ :— ಕೆಲವು ರಿಯಾಯಿತಿಗಳನ್ನು ಹರಿಜನಗಿರಿಜನರಿಗೆ ಕೊಡಬೇಕೆಂದಿದ್ದರೂ ಇಲ್ಲಿಯವರೆಗೂ ಇಷ್ಟು ಜನರಿಗೆ ಭೂಮಿ ಸಿಕ್ಕದಿರುವುದಕ್ಕೆ ಕಾರಣಗಳೇನು? ಮತ್ತು ಅಲ್ಲಿ ಈ ಭೂರಹಿತರಿಗೆ ಹಂಚತಕ್ಕ ಭೂಮಿ ಎಷ್ಟಿದೆ? ಅಲ್ಲಿ ಈ ಜನರಿಂದ ಎಷ್ಟು ದರಖಾಸ್ತು ಅರ್ಜಿಗಳು ಬಂದಿದ್ದವು? ಅವುಗಳಲ್ಲಿ ಎಷ್ಟು ವಿಲೇವಾರಿಯಾಗಿವೆ? ಇನ್ನೆಷ್ಟು ಉಳಿದಿವೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಸುಬ್ಬಯ್ಯ ಶೆಟ್ಟಿ :— ಮೊನ್ನೆ ಸದಸ್ಯರು ಈ ವಿವರಗಳಿಗೆ ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಅವರಿಗೆ ಉತ್ತರಗಳನ್ನು ಒದಗಿಸಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ :— ಚಿಕ್ಕಮಗಳೂರು ಜಿಲ್ಲೆಯಲ್ಲಿ ಭೂ ವರ್ಗಕ್ಕೆ ಅಂದಾಜು 200 ಎಕರೆ ಭೂಮಿಯನ್ನು ಅರಣ್ಯ ಇಲಾಖೆಯಿಂದ ರಿಲೀಜಾ ದ್ದಾರಲ್ಲಿ ಈ ದಲಿತ ವರ್ಗವನ್ನು ನಿರ್ಲಕ್ಷ್ಯಮಾಡಿ ಅಲ್ಲಿ ಒಬ್ಬ ಪ್ರಭಾವಿತರು ತಮ್ಮ ಹೆಸರಿನಲ್ಲಿ ಮತ್ತು ಹೆಂಡತಿಯ ಹೆಸರಿನಲ್ಲಿ ತಲಾ 25 ಎಕರೆ ಭೂಮಿಯನ್ನು ಮಾಡಿ ಕೊಂಡಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಸುಬ್ಬಯ್ಯ ಶೆಟ್ಟಿ :— ಆ ವಿಚಾರ ಸರಕಾರದವರ ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು :—ಇಲ್ಲಿ ಇರತಕ್ಕ ಪ್ರಶ್ನೆಯೇನು? ಮಾನ್ಯ ಸದಸ್ಯರು ಕೇಳಿದ್ದೇನು?

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್ :—ಚಿಕ್ಕಮಗಳೂರು ಜಿಲ್ಲೆಯಲ್ಲಿರತಕ್ಕ ಭೂ ರಹಿತ ರೈತವರ್ಗ 5927 ಎಂದು ಖಚಿತವಾಗಿ ತಿಳಿಸಲಾಗಿದೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅಲ್ಲಿ ಕೆಲವು ಭೂರಹಿತ ರೈತವರ್ಗಕ್ಕೆ ರಿಹ್ಯಾಬಿಲಿಟೇಟ್ ಮಾಡಿದರು. ಆನಂತರ ಮುಂದಿನ ಮೂರನೇ ಮತ್ತು ನಾಲ್ಕನೇ ಪಂಚವಾರ್ಷಿಕ ಯೋಜನೆಗಳಲ್ಲಿ ಇದನ್ನು ಸಂಪೂರ್ಣವಾಗಿ ನಿಲ್ಲಿಸಿದರು. ಅಂದರೆ ಇದಕ್ಕೆ ಆದ್ಯತೆಯನ್ನು ಕೊಡಲಿಲ್ಲ. ಈ ಪ್ರಸಕ್ತ ಯೋಜನೆಯಲ್ಲಾದರೂ ಇದಕ್ಕೆ ಆದ್ಯತೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ?

SRI SUBBAIAH SHETTY :—It is beyond the scope of this question.

* *Seva Sahakari Co-operative Society, Angol*

102. SRI B. B. SAYANAK (Belgaum).— Will the Minister for Co-operation be pleased to state :—

(a) whether there is a Seva Sahakari Co-operative Society Angol, Belgaum City;